# ಪಾಠ ೧ ತುತ್ತೂರಿ (ಪದ್ಯ)

**ಸಾಮರ್ಥ್ಯ :** ಪಠ್ಯವನ್ನು ಓದಿದ ಮೇಲೆ ಯಾರು? ಯಾವಾಗ? ಎಲ್ಲಿ? ಏನು? ಏಕೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು.

**ಪ್ರವೇಶ :** ಸಂತೋಷ, ದುಃಖ, ನೋವು ಈ ಅನುಭವಗಳು ನಿನಗೂ ಆಗಿರಬಹುದಲ್ಲವೇ? ನಿನ್ನ ಒಂದು ಅನುಭವವನ್ನು ನೆನೆಪಿಸಿಕೊ. ಅದಕ್ಕೆ ಒಂದು ಕಾರಣವೂ ಇರಬೇಕಲ್ಲವೇ? ಈಗ ಇಲ್ಲಿನ ಘಟನೆಯನ್ನು ಗಮನಿಸು. ಸಂತೋಷ ಹಾಗೂ ದುಃಖಕ್ಕೆ ಕಾರಣವಾದ ಸಂದರ್ಭಗಳನ್ನು ಗುರುತಿಸು.



ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮಪದನಿಸ ಊದಿದನು
ಸನಿದಪ ಮಗರಿಸ ಊದಿದನು

ತನಗೇ ತುತ್ತೂರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತೂರಿ ನಡೆದನು ಬೀದಿಯಲಿ
ಜಂಭದ ಕೋಳಿಯ ರೀತಿಯಲಿ

ತುತ್ತೂರಿಯೂದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ



ಸರಿಗಮ ಊದಲು ನೋಡಿದನು
ಗಗಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತೂರಿ ಬೋಳಾಯ್ತು

ಬಣ್ಣದ ತುತ್ತೂರಿ ಹಾಳಾಯ್ತು
ಜಂಭದ ಕೋಳಿಗೆ ಗೋಳಾಯ್ತು

– ಜಿ.ಪಿ. ರಾಜರತ್ನಂ

Scanned with CamScanner

## ಪದಗಳ ಅರ್ಥ :

ಕಾಸು – ಹಣ; ಜಂಭ – ಅಹಂಕಾರ; ಹಾಳಾಗು – ಕೆಟ್ಟುಹೋಗು;
ಸದ್ದು – ಸಪ್ಪಳ; ಸಂಜೆ – ಸಾಯಂಕಾಲ.

Scanned with CamScanner